


# ಲಾರಿ ಚಾಲಕನ ಮಗ ಮಂಗೇಶ್ ಕ್ರಿಕೆಟ್ ಪಯಣ

**ಪ್ರಸಕ್ತ ಐಪಿಎಲ್ ಋತುವಿನಲ್ಲಿ ಎಡಗೈ ವೇಗಿ ಯಶ್ ದಯಾಳ್ ಅವರ ಸ್ಥಾನದಲ್ಲಿ ಮಂಗೇಶ್ ಬೌಲಿಂಗ್ ಮಾಡುವುದು ಬಹುತೇಕ ಖಚಿತವಾಗಿದೆ. ಆರ್‌ಸಿಬಿ ವಿಶ್ವಾಸವನ್ನು ಅವರು ಹೇಗೆ ಉಳಿಸಿಕೊಳ್ಳುತ್ತಾರೆಂಬುದೇ ಸದ್ಯದ ಕುತೂಹಲವಾಗಿದೆ.**

■ ಗಿರೀಶ ದೊಡ್ಡಮನಿ

ಮಧ್ಯಪ್ರದೇಶದ ಬೋರಗಾಂವ್ ಎಂಬ ಪುಟ್ಟ ಹಳ್ಳಿಯ ಮಂಗೇಶ್ ಯಾದವ್ ಚಿಕ್ಕವನಿದ್ದಾಗ ಕ್ರಿಕೆಟ್ ಆಡುವುದನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಸಂಸಾರದ ನೊಗ ಎಳೆಯಲು ಮಂಗೇಶ್ ಅವರ ಅಪ್ಪ ರಾಮ ಅವಧ್ ಯಾದವ್ ಅವರು ಹಗಲು, ರಾತ್ರಿ ಲಾರಿ ಚಾಲನೆ ಮಾಡಬೇಕಿತ್ತು. ಅಪಾಯಕಾರಿ ರಸ್ತೆಗಳಲ್ಲಿ ನಿದ್ದೆಗೆಟ್ಟು, ಊಟ ಬಿಟ್ಟು ಕೆಲಸ ಮಾಡುತ್ತಿದ್ದರು.

ಮಗ ಮಂಗೇಶ್ ಓದಿ ವಿದ್ಯಾವಂತನಾಗಿ ಕುಟುಂಬಕ್ಕೆ ಆಸರೆಯಾಗುವ ಕನಸು ಕಂಡಿದ್ದರು ಅವರು. ಆದರೆ ಮಂಗೇಶ್ ಕ್ರಿಕೆಟ್‌ನತ್ತಲೇ ಹೆಚ್ಚು ವಾಲುತ್ತಿರುವುದರ ಬಗ್ಗೆ ತಿಳಿದು ಸ್ವಲ್ಪಕಾಲ ಚಿಂತೆಯೂ ಅವರನ್ನು ಕಾಡಿತ್ತು. ಕ್ರಮೇಣ ಮಗನ ಎಡಗೈ ಬೌಲಿಂಗ್‌ನಲ್ಲಿದ್ದ ಸಾಮರ್ಥ್ಯ ಅವರ ಅರಿವಿಗೂ ಬಂತು. ಅದರಲ್ಲಿಯೇ ಮುಂದುವರಿದು ತರಬೇತಿ ಪಡೆಯಲಿ ಎಂದುಕೊಂಡರು. ಆದರೆ ಹಾದಿ ಸುಗಮವಾಗಿರಲಿಲ್ಲ. ಕ್ರಿಕೆಟ್ ತರಬೇತಿ, ಸಲಕರಣೆಗಳ ಖರ್ಚಿಗಾಗಿ ಅವರು ಹೆಚ್ಚುವರಿ ಪಾಳಿಯಲ್ಲಿ ಟ್ರಕ್ ಚಾಲನೆ ಮಾಡಬೇಕಾಯಿತು. ಬೆಳಗಿನ ಜಾವ 3 ಗಂಟೆಗೆ ಟ್ರಕ್ ಚಾಲನೆ ಆರಂಭವಾಗುತ್ತಿತ್ತು. ಮತ್ತೆ ಆ ಟ್ರಕ್ ಮನೆ ಬಾಗಿಲಿಗೆ ಮರಳುವಾಗ ಹೆಚ್ಚು ಕಮ್ಮಿ ಮಧ್ಯರಾತ್ರಿಯೇ ಆಗಿರುತ್ತಿತ್ತು.

ಅಪ್ಪನ ಪರಿಶ್ರಮ, ಅಮ್ಮನ ಪ್ರೀತಿಗಳೆರಡನ್ನೂ ಮಂಗೇಶ್ ಹುಸಿಗೊಳಿಸಲಿಲ್ಲ. ನಿರಂತರ ಪರಿಶ್ರಮದಿಂದ ಆಡಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗಮನಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಕಳೆದ ಮಿನಿ ಹರಾಜಿನಲ್ಲಿ ಈ ಹುಡುಗ ಮತ್ತು ಕುಟುಂಬದ ಭಾಗ್ಯದ ಬಾಗಿಲು ತೆರೆಯಿತು. ₹ 5.2 ಕೋಟಿ ಮೌಲ್ಯ ಲಭಿಸಿತು. ಮಂಗೇಶ್ ಕುಟುಂಬ, ಊರು ಸಂಭ್ರಮದಲ್ಲಿ ತೇಲಿತು. ಆದರೆ ಕ್ರಿಕೆಟ್ ವಲಯದಲ್ಲಿ ಈ ಆಯ್ಕೆಯು ಅಚ್ಚರಿಗೆ ಕಾರಣವಾಯಿತು. ಏಕೆಂದರೆ, 23 ವರ್ಷದ ಮಂಗೇಶ್ ಇಲ್ಲಿಯವರೆಗೆ ಮಧ್ಯಪ್ರದೇಶ ರಾಜ್ಯ ತಂಡದಲ್ಲಿ ಆಡಿದ್ದು 3 ಲಿಸ್ಟ್ ಎ ಮತ್ತು 2